ಉತ್ತರಿಸಲು

RIR
ಕ್ರ-106
ನಿ-72
145ನೇ ಅಧಿವೇಶನ

## ಕರ್ನಾಟಕ ವಿಧಾನ ಪರಿಷತ್

**ವಿಷಯ:- ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮಹಾಂತೇಶ ಕವಟಗಿಮಠ ಇವರು ನಿಯಮ 72ರಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆ - ರಾಜ್ಯದಲ್ಲಿ ಕೋವಿಡ್-19 ಆರ್.ಟಿ.ಪಿ.ಸಿ.ಆರ್ ಪರೀಕ್ಷೆಯಲ್ಲಿ ಅವ್ಯವಹಾರ ನಡೆಯುತ್ತಿದೆ. ಆರ್.ಟಿ.ಪಿ.ಸಿ.ಆರ್ ಪರೀಕ್ಷೆಯ ದರ ನಿಗದಿಯಲ್ಲಿ ಏಕರೂಪತೆಯಿಲ್ಲದೆ ಆಸ್ಪತ್ರೆಗಳು, ಹಲವು ಲ್ಯಾಬ್‌ಗಳು ಮನಬಂದಂತೆ ದರ ನಿಗದಿ ಮಾಡಿ ಹೆಚ್ಚಿಗೆ ಹಣ ವಸೂಲಿ ಮಾಡುವ ದಂಧೆಗೆ ಇಳಿದಿರುವ ವಿಚಾರ ಹಾಗೂ ಹಣಕ್ಕಾಗಿ ನಕಲಿ ನೆಗೆಟಿವ್ ಪ್ರಮಾಣ ಪತ್ರವನ್ನು ಕೊಡುತ್ತಿರುವ ಬಗ್ಗೆ.**

*******

**ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆ:-**

ರಾಜ್ಯದಲ್ಲಿ ಕೋವಿಡ್-19 RT-PCR ಪರೀಕ್ಷೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಯಾವುದೇ ಲಿಖಿತ ದೂರುಗಳು ಸ್ವೀಕೃತವಾಗಿರುವುದಿಲ್ಲ.

ಕೋವಿಡ್-19 ಪರೀಕ್ಷೆಗಳಾದ RT-PCR, True-NAT, CBNAAT, Rapid Antigen Test, Express RT-PCR Testಗಳಿಗೆ ಅಗತ್ಯವಿರುವ ರಾಸಾಯನಿಕ ಹಾಗೂ ಇತರೇ ವಸ್ತುಗಳ ಮಾರುಕಟ್ಟೆ ದರಕ್ಕೆ ಅನುಗುಣವಾಗಿ RT-PCR, True-NAT, CBNAAT, Rapid Antigen Test, Express RT-PCR Testಗಳಿಗೆ ಖಾಸಗಿ ಪ್ರಯೋಗಶಾಲೆಗಳು ವಿಧಿಸಬಹುದಾದ ದರವನ್ನು ಕಾಲಕಾಲಕ್ಕೆ ಮರು ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ. ಇತ್ತೀಚೆಗೆ ಆದೇಶ ಸಂಖ್ಯೆ: ಆಕುಕ 89 ಸಿಜಿಎಂ 2020, ದಿನಾಂಕ: 13-10-2020ರಲ್ಲಿ ದರ ನಿಗದಿಪಡಿಸಲಾಗಿದೆ (ಪ್ರತಿ ಲಗತ್ತಿಸಿದೆ). ಇದರನ್ವಯವೇ ಖಾಸಗಿ ಪ್ರಯೋಗ ಶಾಲೆಗಳು ದರ ಪಡೆಯಬೇಕಾಗುವುದು.

ಮಾದರಿ ಸಂಗ್ರಹಣೆಯನ್ನು RT-PCR ತಂತ್ರಾಂಶದಲ್ಲಿ ನಮೂದಿಸಿ ಪ್ರಯೋಗಶಾಲಾ ವತಿಯಿಂದ ಪರೀಕ್ಷಾ ಫಲಿತಾಂಶಗಳನ್ನು I.C.M.R ತಂತ್ರಾಂಶದಲ್ಲಿ ನಮೂದಿಸಲಾಗುತ್ತದೆ. ಫಲಿತಾಂಶದ ವರದಿಯನ್ನು ಒಂದು ಬಾರಿ ಗಣಕೀಕರಣಗೊಳಿಸಿದ ನಂತರ ಬದಲಾವಣೆಗೊಳಿಸಲು ಸಾಧ್ಯವಿರುವುದಿಲ್ಲ.

**ಆಕುಕ 32 ಎಸ್ ಎಂ ಎಂ 2022**

(ಡಾ||ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು